25) ಹಂಚಿನಾಳ್ 900

26) ಚಿನ್ನಹಳ್ಳಿ 400

ಶ್ರೀ ಪಿ.ಸಿ. ಸಿದ್ದನಗೌಡರ್ (ಶ್ರೀ ಹಂಪನಗೌಡ ಅವರ ಪರವಾಗಿ) : ಮಾನ್ಯ ಉಪಾಧ್ಯಕ್ಷರೆ, ರಾಯಚೂರು ಜಿಲ್ಲೆಯಲ್ಲಿ ಮದರ್ ಡೈರಿಯನ್ನು ತೆರೆಯುವ ಉದ್ದೇಶ ಸರ್ಕಾರಕ್ಕೆ ಇದೆಯೇ ಎಂದು ಕೇಳಿದಕ್ಕೆ 'ಇಲ್ಲ' ಎಂದು ಹೇಳಿದ್ದೀರಿ. ಆದ್ದರಿಂದ ಇನ್ನು ಮುಂದಾದರೂ ಪರಿಶೀಲನೆ ಮಾಡಿ ರಾಯಚೂರಿನಲ್ಲಿ ಮದರ್ ಡೈರಿ ಮಾಡುತ್ತೀರಾ? ಎನ್ನುವುದು ಒಂದು. ಇನ್ನು ಎರಡನೆಯದು ಹೊಸದಾಗಿ ಶೀತಲೀಕರಣ ತೆರೆಯುವ ಉದ್ದೇಶ ಸರ್ಕಾರಕ್ಕಿದೆಯೇ ಎಂದು ಕೇಳಿದ್ದಕ್ಕೆ, 'ಇದೆ' ಎಂದು ಹೇಳಿದ್ದಾರೆ. ಹಾಗಿದ್ದಲ್ಲಿ ಸಿಂಧನೂರಿನಲ್ಲಿ ಯಾವಾಗ ಮಾಡುತ್ತೀರಿ ಎಂದು ಕೇಳುತ್ತೇನೆ.

ಶ್ರೀ ಬಸವರಾಜ್ ಪಾಟೀಲ್: ಬೆಂಗಳೂರಿನಲ್ಲಿ ಮದರ್ ಡೈರಿ ಒಂದೇ ಇದೆ. ಈಗಾಗಲೇ ಕೆ.ಎಂ.ಎಫ್ ವತಿಯಿಂದ ರಾಯಚೂರು ಜಿಲ್ಲೆಯಲ್ಲಿ ಒಂದು 30 ಸಾವಿರ ಲೀಟರ್‌ನ ಡೈರಿಯನ್ನು ಸ್ಥಾಪನೆ ಮಾಡಲು ಎನ್.ಡಿ.ಡಿ.ಪಿಯವರು ಮಂಜೂರು ಮಾಡಿದ್ದಾರೆ. ಮತ್ತು ಶೀತಲೀಕರಣ ಕೇಂದ್ರ ಸಿಂಧನೂರು ತಾಲ್ಲೂಕಿನ ದಡೆಸುಗೂರ್ ಗ್ರಾಮದಲ್ಲಿ ದಿನಂಪ್ರತಿ 30 ಸಾವಿರ ಲೀಟರ್ ಹಾಲನ್ನು ಶೀತಲೀಕರಣಗೊಳಿಸುವ ಸಾಮರ್ಥ್ಯವುಳ್ಳ ಒಂದು ಶೀತಲೀಕರಣ ಕೇಂದ್ರವನ್ನು ಸ್ಥಾಪಿಸಲು ರಾಷ್ಟ್ರೀಯ ಹೈನು ಅಭಿವೃದ್ಧಿ ಮಂಡಳಿಯುವರು ಮಂಜೂರಾತಿ ನೀಡಿದ್ದು ಈ ಕೆಲಸವೂ ಆದಷ್ಟು ಬೇಗ ಪ್ರಾರಂಭವಾಗುವ ಹಂತದಲ್ಲಿದೆ.

ಚಿಂತಾಮಣಿ ತಾಲ್ಲೂಕಿನಲ್ಲಿ ಅರಣ್ಯ ಅಭಿವೃದ್ಧಿ ಭೂ ಮಂಜೂರಾತಿ

2325 - ಶ್ರೀ ಚೌಡರೆಡ್ಡಿ (ಚಿಂತಾಮಣಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚಿಂತಾಮಣಿ ತಾಲ್ಲೂಕು ಗಂಗಾವಾರಹಳ್ಳಿ ಗ್ರಾಮದ ಸರ್ವೆ ನಂಬರ್ 20 ಮತ್ತು 21ರಲ್ಲಿ ಅರಣ್ಯ ಅಭಿವೃದ್ಧಿಗೋಸ್ಕರ ಎಷ್ಟು ಎಕರೆಗಳನ್ನು ಸರ್ಕಾರದವರು ಅರಣ್ಯ ಇಲಾಖೆಗೆ ಕೊಟ್ಟಿರುತ್ತಾರೆ, ನಕ್ಷೆ ಸಹಿತ ವಿವರಗಳನ್ನು ಒದಗಿಸುವುದು.

ಆ) ಸದರಿ ಸರ್ವೆ 20 ಮತ್ತು 21ರಲ್ಲಿ ಅರಣ್ಯ ಇಲಾಖೆಗೆ ಕೊಟ್ಟು ಉಳಿಕೆ ಇರುವ ಜಮೀನು ಎಷ್ಟು? ಈ ಜಮೀನಿನಲ್ಲಿ ಎಷ್ಟು ಜನ ಬಡ ರೈತರು ಬಗರ್ ಹುಕುಂ ಸಾಗುವಳಿ ಮಾಡುತ್ತಿದ್ದಾರೆ? ವಿವಿರಗಳನ್ನು ನೀಡುವುದು

ಶ್ರೀ.ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) :

ಅ)

		ಎಕರೆಗಳು	*ಗುಂಟೆಗಳು*
ಸರ್ವೆ ನಂಬರ್	20	-450	-10
ಸರ್ವೆ ನಂಬರ್	21	-300	-22
ಒಟ್ಟು		750	- 32

		ಎಕರೆಗಳು	*ಗುಂಟೆಗಳು*
ಸರ್ವೆ ನಂಬರ್	20	60	- 00
ಸರ್ವೆ ನಂಬರ್	21	130	- 00
ಒಟ್ಟು		**190**	**- 00**

ಸದರಿ ಜಮೀನುಗಳನ್ನು ಒಟ್ಟು 84 ಜನರು ಬಗರ್ ಹುಕುಂ ಸಾಗುವಳಿ ಮಾಡುತ್ತಿದ್ದರು.

ಈ 84 ಬಗರ್ ಹುಕುಂ ಸಾಗುವಳಿದಾರರ ಪೈಕಿ, 14 ಜನರಿಗೆ ಸದರಿ ಗ್ರಾಮದ ಸರ್ವೆ ನಂ.22ರ ಪೈಕಿ 1971ರಲ್ಲಿ ಜಮೀನು ಮಂಜೂರಾಗಿದ್ದರೂ, ಸರ್ವೆ ನಂ. 20 ಮತ್ತು 21ರಲ್ಲಿಯೂ ಬಗರ್ ಹುಕುಂ ಸಾಗುವಳಿ ಮಾಡುತ್ತಿದ್ದರು.

ಆದಾಗ್ಯೂ, ಸದರಿ ಜಮೀನಿನಲ್ಲಿ, ಈ 84 ಜನರ ಪೈಕಿ ಈಗ್ಯೆ ಯಾರೂ ಸ್ವಾಧೀನಾನುಭವದಲ್ಲಿರುವುದಿಲ್ಲ. ಯಾಕೆಂದರೆ ಈ ಜಮೀನಿನಲ್ಲೂ ಸಹಾ ಅರಣ್ಯ ಇಲಾಖೆಯವರು ಗುಂಡಿಗಳನ್ನು ತೆಗೆದು ಸಸಿಗಳನ್ನು ನೆಟ್ಟಿರುತ್ತಾರೆ.

ಶ್ರೀ ಚೌಡರೆಡ್ಡಿ : ಮಾನ್ಯ ಉಪಾಧ್ಯಕ್ಷಿಣಿಯವರೆ, ಉತ್ತರದಲ್ಲಿ (ಅ) ಸರ್ವೆ ನಂಬರ್ 20,21 ರಲ್ಲಿ 750 ಎಕರೆ 32 ಗುಂಟೆಗಳನ್ನು ಅರಣ್ಯ ಇಲಾಖೆಗೆ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಉಳಿಕೆ 190 ಎಕರೆ ಇದೆ ಎಂದು ಒಪ್ಪಿಕೊಂಡಿದ್ದಾರೆ. ಬಹುಶಃ 20 ವರ್ಷಗಳಿಂದ ಅನೇಕ ಬಡ ರೈತರು ಈ ಭೂಮಿಯನ್ನು ಸಾಗುವಳಿ ಮಾಡುತ್ತಿದ್ದಾರೆ. ಇವರೇ ಒಪ್ಪಿಕೊಂಡಂತೆ ಈ ಜಮೀನನ್ನು 84 ಜನರು ಬಗರ್ ಹುಕುಂ ಸಾಗುವಳಿ ಮಾಡುತ್ತಿದ್ದಾರೆ. ಅರಣ್ಯ ಇಲಾಖೆಯವರು ಡಿಕ್ಟೇಟರ್ಸ್ ತರಹ ವರ್ತಿಸುತ್ತಿದ್ದಾರೆ. ಇವರುಗಳ ಮೇಲೆ ಅನೇಕ ಕೇಸ್‌ಗಳನ್ನು ಹಾಕುತ್ತಿದ್ದಾರೆ, ಬಹಳ ತೊಂದರೆ ಕೊಡುತ್ತಿದ್ದಾರೆ. ಇದರ ಬಗ್ಗೆ ಪ್ರಾಮಾಣಿಕವಾಗಿ ತಾವು ಎನ್‌ಕ್ವೈರಿ ಮಾಡಿಸಿ, ಸರ್ವೆ ಮಾಡಿಸಿ, ಈಗ ಬಗರ್‌ಹುಕುಂ ಸಾಗುವಳಿ ಮಾಡುತ್ತಿರುವವರಿಗೆ ಏನಾದರೂ ಸಹಾಯ ಮಾಡುವುದಕ್ಕೆ ಆಗುತ್ತದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಉಪಾಧ್ಯಕ್ಷಿಣಿಯವರೆ, ನಮ್ಮ ಲ್ಯಾಂಡ್ ರೆವಿನ್ಯೂ ಆಕ್ಟ್‌ಗೆ ತಿದ್ದುಪಡಿ ತಂದು ಎಲ್ಲಿ ಬಗರ್‌ಹುಕುಂ ಸಾಗುವಳಿ ಮಾಡುತ್ತಿದ್ದಾರೋ, ಅದನ್ನು ಸಕ್ರಮಗೊಳಿಸಬೇಕು ಎನ್ನತಕ್ಕಂಥ ನಿರ್ಣಯವನ್ನು ತೆಗೆದುಕೊಂಡಿದ್ದೇವೆ ಮತ್ತು ಅಪ್ಲಿಕೇಷನ್ಸ್ ಅನ್ನು ಕರೆದಿದ್ದೇವೆ. ಅಪ್ಲಿಕೇಷನ್ಸ್ ಸಲ್ಲಿಸಲು ಕಡೆಯ ತಾರೀಖು ಈ ತಿಂಗಳ 17ನೇ ತಾರೀಖು. ಅದರ ಪ್ರಕಾರ ಇವರೂ ಅಪ್ಲಿಕೇಷನ್ಸ್ ಹಾಕಿದರೆ, ಕಾನೂನು ರೀತ್ಯ ಇವರಿಗೂ ರೆಗ್ಯೂಲರೈಸ್ ಆಗುತ್ತದೆ. ತಾವು ಇದರ ಬಗ್ಗೆ ಎನ್‌ಕ್ವೈರಿ ಮಾಡಿಸಬೇಕೆಂದು ಹೇಳುತ್ತಿದ್ದೀರಿ. ನಾನು ಡೆಪ್ಯುಟಿ ಕಮಿಷನರ್‌ರವರನ್ನು ಕಳುಹಿಸಿ ಇದರ ಬಗ್ಗೆ ತನಿಖೆ ಮಾಡಿಸುತ್ತೇನೆ.

ಅಲೆಮಾರಿ ಜನಾಂಗದವರಿಗೆ ಜಮೀನಿನ ಖಿಮ್ಮತ್ತು ಮನ್ನಾ

2432 - ಶ್ರೀ ಎಸ್. ರುದ್ರಪ್ಪ (ತುರುವೇಕೆರೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬಗರ್ ಹುಕುಂ ಸಾಗುವಳಿ ಜಮೀನನ್ನು ಖಾಯಂಗೊಳಿಸುವ ಬಗ್ಗೆ ಸರ್ಕಾರಿ ಆದೇಶ ಹೊರಡಿಸಲಾಗಿದೆಯೇ?

ಆ) ಸದರಿ ಆದೇಶದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರಿಗೆ ಪೂರ್ಣ ಖಿಮ್ಮತ್ತನ್ನು ಮನ್ನಾ ಮಾಡಲು ಅವಕಾಶವಿದೆಯೇ, ಇಲ್ಲದಿದ್ದಲ್ಲಿ ಕಾರಣವೇನು?

ಇ) ಬಗರ್ ಹುಕುಂ ಜಮೀನು ಖಾಯಂಗೊಳಿಸುವಾಗಿ ಅಲೆಮಾರಿ ಜನಾಂಗದವರಿಗೆ ಪೂರ್ಣ ಖಿಮ್ಮತ್ತನ್ನು ಮನ್ನಾ ಮಾಡಲು ಅವಕಾಶವಿದೆಯೇ? ಇಲ್ಲದಿದ್ದರೆ ಕಾರಣವೇನು?

ಈ) ಅಲೆಮಾರಿ ಜನಾಂಗದವರಿಗೆ ಖಿಮ್ಮತ್ತು ಮನ್ನಾ ಮಾಡಲು ಹಾಗೂ ಪರಿಶಿಷ್ಟರ ಸೌಲಭ್ಯ ವಿಸ್ತರಿಸಲು ಸಂವಿಧಾನದಲ್ಲಿ ಅವಕಾಶವಿಲ್ಲವೇ, ಇದ್ದಲ್ಲಿ ಇವರಿಗೇಕೆ ಆ ಸೌಲಭ್ಯವನ್ನು ವಿಸ್ತರಿಸಬಾರದು?